## ಪದಬಂಧ



**ಎಡದಿಂದ ಬಲಕ್ಕೆ**

1. ಹೊಸ ಪರಿಯ ಮಾತುಗಳನ್ನಾಡಿದ್ದಕ್ಕೆ ಈ ಅಪಹಾಸ್ಯ 3
3. ಸುಮ್ಮನಿರುವಂತೆ ಸೂಚಿಸಿದ ಸಲಹೆಗೆ ಒಪ್ಪಿಗೆ ಸಿಕ್ಕಿದೆ 3
4. ಹೊಸಬರಿಗೆ ಕೆಲಸ ಸಿಗಲೆಂಬುದೇ ಆತನ ಆಶಯ 3
6. ಅನ್ಯಾಯವನ್ನು ಸರಿಪಡಿಸಲು ಪ್ರೀತಿ ಸ್ನೇಹಗಳೇ ಅತ್ಯುತ್ತಮ 4
8. ಸಕಲವನ್ನೂ ಮೊತ್ತಮಾಡುವ ಗಣಿತ ಕ್ರಿಯೆ 4
10. ದೋಷರಹಿತ ಎಂಬುದು ನಿರೀಕ್ಷಿಸಿದಂತೆಯೇ ತೀರ್ಮಾನವಾಗಿರುವ ವಿಷಯ 4
12. ಮರಕತ ಪೋಣಿಸಿರುವ ಹಾರ ತೊಟ್ಟಿದ್ದಾನೆ ನೋಡಿ ಲಕ್ಷ್ಮೀಪತಿ 4
16. ಪ್ರದೀಪನ ತೋಟದಲ್ಲಿ ಯಾವುದು ಈ ವಾಸನಾಮಯ ಸೊಪ್ಪು? 3
17. ನೂರೆಣಿಸುವ ತನಕ ನಿಲ್ಲಿಸದೆ ನಾಟ್ಯ ಮಾಡಿದಾತ 3
18. ವರ್ತಕನಂತೆಯೇ ಈತನೂ; ಆದರೆ ಎಲ್ಲರಿಗೂ ಹಂಚುವವ 4

**ಮೇಲಿನಿಂದ ಕೆಳಕ್ಕೆ**

1. ಪಂಥಾಹ್ವಾನ ನೀಡಿ ಸ್ಪರ್ಧೆಗೆ ಬಂದವ ಸೋತು ಬಿದ್ದ 3
2. ಇಷ್ಟು ಭಾರೀ ಹಾಸಿಗೆಯನ್ನು ಸಾಗಿಸಲು ನೆರವು ಬೇಕೇ ಬೇಕು 3
3. ಸಂಧಾನಕ್ಕಾಗಿ ಸಭೆ ಸೇರಿದ ಮನೆ ಯಾವುದು? 3
5. ಭಾರೀ ಕುಡುಕನಷ್ಟೇ ಅಲ್ಲ; ಕೆಟ್ಟದನ್ನೇ ಮಾಡುವ ಮನುಷ್ಯ ಕೂಡ 3
6. ಅಭಿಮನ್ಯುವಿನ ಬಗೆಗೆ ಭಾರೀ ಹೆಮ್ಮೆ, ಗೌರವ ಹೊಂದಿರುವಾತ 4
7. ಚಿತ್ತಕ್ಕೆ ತೋಚಿದಂತೆಲ್ಲ ಅಲ್ಲ; ಹೇಗೆ ಸೂಕ್ತವೋ ಹಾಗೆ 4
8. ಲಂಚ ಸಂಪಾದಿಸುತ್ತಿದ್ದ ಕಾರ್ಯಕ್ಕೆ ಅಡ್ಡಿ, ಅಂತ್ಯ ಬಂತು 4
9. ನೀವೆಣಿಸಿದಂತಲ್ಲ; ಇದು ಶುದ್ಧ ಬೆಣ್ಣೆ 4
11. ಪುಕಾರಿನ ಬೆನ್ನು ಹತ್ತಲು ಕುದುರೆಯನ್ನು ಏರುವ ಮೆಟ್ಟಲು 3
13. ಮೂರು ಜನ್ಮಗಳಿಗೆ ಸಾಕಾಗುವಷ್ಟಿದೆ ಸ್ವಚ್ಛಕಾರಕ 3
14. ವೈಮನಸ್ಯಕ್ಕೆ ದಾರಿಮಾಡಬಾರದೆಂದು ಕೋರಿಕೆ 3
15. ಇದೇ ಸ್ಥಿತಿ, ಆತಂಕ ಮುಗಿಯುವವರೆಗೂ... 3

### 08–02–2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಅರಿಸಿನ 3. ಅಖಾಡ 4. ಖಬರು 6. ಗುರುತರ 7. ಪಾರಾವಾರ 8. ಧನದಾಸ 10. ಗೆಣೆಕಾರ 12. ತಾರುಮಾರು 14. ಭಗವಂತ 16. ಗಡವ 17. ರುಮಾಲು 18. ನಜರು

**ಮೇಲಿನಿಂದ ಕೆಳಕ್ಕೆ**

1. ಅಡಗು 2. ನಖರ 3. ಅಹವಾಲು 5. ರುಜಿನ 7. ಪಾವಟಿಗೆ 9. ಸಹಸ್ರಾರು 11. ಕಾಳಿಂಗ 13. ಬಾರುಕೋಲು 14. ಭವನ 15. ತರುಣಿ

ಪ್ರಶ್ನಾಂಕಣ

# ಶಾರ್ಕ್ ಕಥೆ – ಏನು ವ್ಯಥೆ?

ಕಳೆದ ತಿಂಗಳ ಮೊದಲ ವಾರ ಸುಪ್ರಸಿದ್ಧ ಅಂತರರಾಷ್ಟ್ರೀಯ ವಿಜ್ಞಾನ ಪತ್ರಿಕೆ 'ಸೈನ್ಸ್'ನಲ್ಲಿ ಶಾರ್ಕ್ ಕುರಿತ ಒಂದು ವೈಜ್ಞಾನಿಕ ಅಧ್ಯಯನದ ವರದಿ ಪ್ರಕಟವಾಗಿದೆ. ಧರೆಯ ಸಾಗರಾವಾರದ ಜೀವಜಾಲದ ಸ್ವಾಸ್ಥ್ಯ ಸಮತೋಲನಗಳಲ್ಲಿ ನಿರ್ಣಾಯಕ ಪಾತ್ರವನ್ನು ಪಡೆದಿರುವ ಈ ಮತ್ಸ್ಯದ ಬದುಕು ತೀರ ದುಸ್ಥಿತಿಯಲ್ಲಿರುವುದನ್ನು ಆ ಅಧ್ಯಯನ ಸ್ಪಷ್ಟಪಡಿಸಿದೆ.

ಮತ್ಸ್ಯವರ್ಗಕ್ಕೇ ಸೇರಿದ್ದರೂ ಶಾರ್ಕ್‌ಗಳದು ಮೃದು ಎಲುಬುಗಳ (ಕಾರ್ಟಿಲೇಜ್) ಶರೀರ. ಎದೆ ಭಾಗದಿಂದ ಇಕ್ಕೆಡೆಗಳಿಗೂ ಚಾಚಿದ ಈಜು ರೆಕ್ಕೆಗಳು (ಫಿನ್ಸ್) ಶಾರ್ಕ್‌ಗಳ ಶರೀರದ ಮತ್ತೊಂದು ವೈಶಿಷ್ಟ್ಯ (ಚಿತ್ರ 1ರಲ್ಲಿ ಗಮನಿಸಿ). ಶಾರ್ಕ್‌ಗಳಲ್ಲಿ ಈವರೆಗೆ 400 ಪ್ರಭೇದಗಳನ್ನು ಗುರುತಿಸಲಾಗಿದೆ. ಬೃಹದಾಕಾರದ ದಿ ಗ್ರೇಟ್ ವೈಟ್‌ನಿಂದ (ಚಿತ್ರ1) ಏಳೇ ಅಂಗುಲ ಉದ್ದದ 'ದಿ ಡ್ವಾರ್ಫ್ ಲ್ಯಾಂಟರ್ನ್ ಶಾರ್ಕ್'ವರೆಗೆ ಇದರದು ವಿಪರೀತ ಗಾತ್ರಾಂತರ.

ಬಹಳ ಕಾಲದಿಂದಲೂ ಶಾರ್ಕ್‌ಗಳು ಮನುಷ್ಯರ ಜಿಹ್ವಾಚಾಪಲ್ಯಕ್ಕೆ ತೀವ್ರ ಗುರಿಯಾಗಿವೆ. ಅದರಲ್ಲೂ ಶಾರ್ಕ್‌ಗಳ ಈಜು ರೆಕ್ಕೆಗಳನ್ನು ಬಳಸಿ ತಯಾರಿಸುವ 'ಶಾರ್ಕ್ ಫಿನ್ ಸೂಪ್'ಗೆ ವಿಪರೀತ ಬೇಡಿಕೆ. ಅದಕ್ಕಾಗಿ ಮೀನುಗಾರರು ಭಾರೀ ಹಡಗುಗಳಲ್ಲಿ ತೆರಳಿ ಬಲೆ ಬೀಸಿ ಶಾರ್ಕ್‌ಗಳನ್ನು ಸೆರೆ ಹಿಡಿದು, ಹಡಗಿನ ಮೇಲಕ್ಕೆಳೆದು, ಅವುಗಳ ಈಜು ರೆಕ್ಕೆಗಳನ್ನು ಮಾತ್ರ ಕತ್ತರಿಸಿ ತೆಗೆದು (ಚಿತ್ರ2) ಉಳಿದ ಇಡೀ ಶರೀರವನ್ನು ಕಡಲಿಗೇ ವಾಪಸ್ ತಳ್ಳುತ್ತಿದ್ದರು. ಅಂಥ ಶಾರ್ಕ್‌ಗಳು ಈಜಲಾಗದೆ ಸಾಗರದ ತಳಕ್ಕೆ ಮುಳುಗಿ ದಾರುಣ ಯಾತನೆಯನ್ನು ಅನುಭವಿಸಿ ಸಾಯುತ್ತಿದ್ದವು. ಹೀಗೆ ಮನುಷ್ಯರ ಕರಾಳ ಬೇಟೆಗೆ ಬಲಿಯಾಗುತ್ತಿದ್ದ ಶಾರ್ಕ್‌ಗಳ ಸಂಖ್ಯೆ ವರ್ಷಕ್ಕೆ ಆರು ಕೋಟಿಯಷ್ಟಿತ್ತು. ಹಾಗಾಗಿ ಕೆಲವು ಪ್ರಭೇದಗಳಂತೂ ಅಳಿದುಹೋಗುವ ಹಂತವನ್ನೇ ತಲುಪಿದವು. ಇದನ್ನು ಮನಗಂಡ 150ಕ್ಕೂ ಹೆಚ್ಚು ರಾಷ್ಟ್ರಗಳು ಶಾರ್ಕ್‌ಗಳ ಈಜು ರೆಕ್ಕೆಗಳ ಛೇದನವನ್ನು ನಿಷೇಧಿಸಿದವು; ಉಗ್ರ ಕಾನೂನುಗಳನ್ನು ಜಾರಿಗೊಳಿಸಿದವು. ಆದರೆ ವಿಪರ್ಯಾಸ ಏನೆಂದರೆ, ಆ ನಂತರ ಶಾರ್ಕ್‌ಗಳು ಮೊದಲಿಗಿಂತಲೂ ಹೆಚ್ಚು ಬಲಿಯಾಗತೊಡಗಿದವು!

ಏಕೆಂದರೆ, ಶಾರ್ಕ್‌ಗಳನ್ನು ಬೇಟೆಯಾಡುತ್ತಿರುವ ಜನ ಅವುಗಳ ಈಜು ರೆಕ್ಕೆಗಳನ್ನು ಮಾತ್ರ ಕತ್ತರಿಸಿ ತರುವ ಬದಲು ಇಡೀ ಶಾರ್ಕ್‌ಗಳನ್ನೇ ಸಾಗಿಸಿ ತರುತ್ತಿದ್ದಾರೆ. ಶಾರ್ಕ್‌ಗಳ ರೆಕ್ಕೆಗಳಿಗಷ್ಟೇ ಅಲ್ಲದೆ ಅವುಗಳ ಮಾಂಸಕ್ಕೂ ಈಗ ಬಹಳ ಬೇಡಿಕೆ ಬಂದಿದೆ; ಮೊದಲಿಗಿಂತಲೂ ಹೆಚ್ಚಾಗಿದೆ! ತತ್ಪರಿಣಾಮವಾಗಿ ಪ್ರಸ್ತುತ ವರ್ಷಕ್ಕೆ ಕನಿಷ್ಠ ಎಂಟು ಕೋಟಿ ಶಾರ್ಕ್‌ಗಳು ಬಲಿಯಾಗುತ್ತಿವೆ. ಶಾರ್ಕ್‌ಗಳ ಮಾಂಸವನ್ನು ಕೊಳ್ಳುವ, ಮಾರುವ ಕಳ್ಳದಂಧೆ 200 ರಾಷ್ಟ್ರಗಳಿಗೆ ಹರಡಿದೆ; ಭಾರತವೂ ಈ ಪಟ್ಟಿಯಲ್ಲಿದೆ.




ಜಗದಾದ್ಯಂತ ಈ ಕಾನೂನುಬಾಹಿರ ವ್ಯಾಪಾರದ ವಾರ್ಷಿಕ ವಹಿವಾಟು ಒಟ್ಟು 2,100 ಶತಕೋಟಿ ರೂಪಾಯಿಗಳನ್ನು ತಲುಪಿದೆ! ಎಂಥ ದುರಂತ ಅಲ್ಲವೇ?

■ ಎನ್. ವಾಸುದೇವ್